ಅ) ಸರ್ಕಾರಿ ಆದೇಶ ಸಂಖ್ಯೆ ಅಪಜೀ 139 ಇಸಿಒ 2008 ಬೆಂಗಳೂರು, ದಿನಾಂಕ: 19.4.2010ರ ಪ್ರಕಾರ ಹೆಣ್ಣೂರು ಕೆರೆ, ಮಡಿವಾಳ, ಜಾರಕಬಂಡೆ ಕಾವಲ್, ಮೈಲಸಂದ್ರ ಮತ್ತು ಪುಟ್ಟೇನಹಳ್ಳಿ ಕೆರೆಗಳನ್ನು ಮಾತ್ರ ಅರಣ್ಯ ಇಲಾಖೆಯಲ್ಲಿಯೇ ಉಳಿಸಿಕೊಂಡು ಉಳಿದ ಕೆರೆಗಳನ್ನು ಬಿಡಿಎ ಮತ್ತು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆ. ಆದ್ದರಿಂದ ಹೆಣ್ಣೂರು ಕೆರೆಯನ್ನು ಬಿ.ಡಿ.ಎ. ಗೆ ಹಸ್ತಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಣ್ಣು ಕುಸಿದು ಕಾರ್ಮಿಕರ ಸಾವು

579 (948) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯ ಹುಳಿಮಾವು ಸಮೀಪದ ಆರಾಧನಾ ಲೇಔಟ್‌ನಲ್ಲಿ ಬಿಡಬ್ಲ್ಯೂ ಎಸ್‌ಎಸ್‌ಬಿ ಗೆ ಸೇರಿದ ಒಳಚರಂಡಿ ಕಾಮಗಾರಿ ವೇಳೆ ಮಣ್ಣು ಕುಸಿದು ಇಬ್ಬರು ಕೂಲಿ ಕಾರ್ಮಿಕರು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಾವಿಗೆ ಹೊಣೆಗಾರರು ಯಾರು; ಸರ್ಕಾರವೋ ಅಥವಾ ಕಾಮಗಾರಿ ಹೊಣೆ ಹೊತ್ತ ಹುತ್ತಿಗೆದಾರರೋ;

ಇ) ಈ ದುರ್ದೈವಿ ಕುಟುಂಬಕ್ಕೆ ಸರ್ಕಾರ/ ಇಲಾಖೆ ಪರಿಹಾರ ನೀಡಿದೆಯೇ; ಹಾಗಿದ್ದಲ್ಲಿ ಪರಿಹಾರದ ಮೊತ್ತವೆಷ್ಟು? (ವಿವರ ನೀಡುವುದು);

ಈ) ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ವಿಮಾ ಯೋಜನೆಯಲ್ಲಿರುವಾಗ ಕಾರ್ಡು ಉಳ್ಳವರಿಗೆ ಕೂಲಿ ಯೋಜನೆಯನ್ನು ಸರ್ಕಾರ ಕಟ್ಟುನಿಟ್ಟಾಗಿ ಏಕೆ ಜಾರಿಗೊಳಿಸಬಾರದು? ಈ ಯೋಜನೆಯನ್ನು ಜಾರಿಗೊಳಿಸಲು ಇರುವ ತೊಡಕುಗಳೇನು;

ಉ) ಸರ್ಕಾರದ ಮತ್ತು ಮಹಾನಗರ ಪಾಲಿಕೆಯ ಕಾಮಗಾರಿಗಳನ್ನು ಮಾಡಿಸುವಾಗ ಈ ನಿಯಮವನ್ನು ಜಾರಿಗೊಳಿಸುವುದೆ;

ಶ್ರೀ ಬಿ.ಎನ್. ಬಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು) :
ಅ) ಸರ್ಕಾರದ ಗಮನಕ್ಕೆ ಬಂದಿದೆ.

Yes, has come to the notice of the Government.

ಆ) ಕಾಮಗಾರಿ ಹೊಣೆಗಾರಿಕೆ ಹೊತ್ತ ಗುತ್ತಿಗೆದಾರರು ಹಾಗೂ ಮೂಲ ಮಾಲೀಕರಾದ ಬಿಡಬ್ಲ್ಯೂಎಸ್ಎಸ್‌ಬಿರವರು ಹೊಣೆಗಾರರಾಗಿರುತ್ತಾರೆ.

The contractor and Principal Employer, namely, BWSSB, who have taken up the work, are responsible.

ಇ) ಗುತ್ತಿಗೆದಾರರಾದ, ಮೆ: ಸೀವ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ಮೆ: ಅಯ್ಯಪ್ಪ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ. ಹೈದರಾಬಾದ್ ಇವರುಗಳು ಮೃತ ಕಾರ್ಮಿಕರಾದ ಶೇಖಪ್ಪ ಇವರ ಅವಲಂಬಿತರಿಗೆ ರೂ. 6,50,000/–ಗಳನ್ನು ಹಾಗೂ ಪೆದ್ದಪುಡಿ ಭೂಲೋಕಂ ಇವರ ಅವಲಂಬಿ ತರಿಗೆ ರೂ.1,80,000/–ಗಳನ್ನು ತಾತ್ಕಾಲಿಕವಾಗಿ ಪರಿಹಾರ ರೂಪದಲ್ಲಿ ಪಾವತಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

ಮುಂದುವರೆದು, ನೌಕರರ ಪರಿಹಾರ ಕಾಯ್ದೆ, 1923 ರಡಿಯಲ್ಲಿ ಕಾರ್ಮಿಕ ಅಧಿಕಾರಿ ಹಾಗೂ ನೌಕರರ ಪರಿಹಾರ ಆಯುಕ್ತರು, ಉಪ ವಿಭಾಗ–2, ಬೆಂಗಳೂರು ಇವರು ಕಾಯ್ದೆ ಅನ್ವಯ ನ್ಯಾಯಾಲಯದಲ್ಲಿ ಪರಿಹಾರ ಹಣವನ್ನು ಠೇವಣಿ ಮಾಡುವಂತೆ ನೋಟಿಸನ್ನು ಜಾರಿ ಮಾಡಿರುತ್ತಾರೆ. ಅದರನ್ವಯ, ದಿನಾಂಕ:25–07–2012 ರಂದು ಗುತ್ತಿಗೆದಾರರ ಪ್ರತಿನಿಧಿ ವಿಚಾರಣೆಗೆ ಹಾಜರಿದ್ದು ಕಾಯ್ದೆ ಅನ್ವಯ ನಿಗದಿತಗೊಂಡ ಪರಿಹಾರ ಹಣವನ್ನು ಠೇವಣಿ ಮಾಡಲು ಒಪ್ಪಿರುತ್ತಾರೆ. ವಿಚಾರಣೆ ನಡೆಯುತ್ತಿದೆ.

The Contractors M/s SEW Infrastructure Ltd., Hyderabad and Ayyappa Infra Project Pvt. Ltd., Hyderabad have paid the dependants of the deceased workmen namely, Shekappa and Peddapudi Bhulokam Rs.6,50,000/- and 1,80,000/- respectively as interim compensation and have produces documents in this regard.

Further, as per the provisions of Employees compensation Act, 1923, the Labour Officer and Employees Compensation Commissioner. Sub-Division-2, Bangalore has issued notice to deposit compensation amount in his court. In

consequence to this a representative of the contractor has appeared before the authority on 25-07-2012 and has consented to deposit the compensation amount. The court proceedings is underway.

ಈ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಹಾಗೂ ಅದರಡಿ ರಚಿಸಿರುವ ನಿಯಮಗಳನ್ನು ಜಾರಿಗೊಳಿಸಲಾಗಿದೆ.

ಈ ನಿಯಮಗಳ ಅಡಿಯಲ್ಲಿ ಗುರುತಿನ ಚೀಟಿ ಪಡೆದ ನೋಂದಾಯಿತ ಕಾರ್ಮಿಕರಿಗೆ 13 ವಿವಿಧ ಸೌಲಭ್ಯ ಯೋಜನೆಗನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಒದಗಿಸಲಾಗುತ್ತಿದೆ.

ಕಟ್ಟಡ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ.

The rules framed under the Buildings and Other Construction Workers (Regulation of employment and Conditions of Service) act, 1996 are being implemented.

Identity cards have been issued to the construction workers who have been registered under these rules. They are being provided with 13 various welfare benefits through Building and Other Construction Workers Welfare Board.

Minimum wages have been fixed to construction workers.

ಉ) ಹೌದು.

Yes.